ರಂಡೇರು ನಾನು ದಿನಾ ಬಡಿಸಿಗೆಂಡರ, ಒಂದಿನ ಏನಾಯ್ತು ಅಂತ ಕೇಳಿಲ್ಲ. ಇವತ್ತು ಒಂದೇಟು ಬಡದದಕ ಮಾಡೋ ದಗದ ಬುಟ್ಟು ಎಷ್ಟು ಜಲ್ದಿ ಓಡಿ ಬಂದಾರ ನೋಡು'ಅಂತ ಅನಕೊಂಡ.

'ಅಲೋ ಸಿಗ್ಲಗ್ಯಾ ಆ ಪುಳ್ಳೆ ದುಡುದಾಕತ್ತೈತಿ, ಸುಮ್ನೆ ತಿಂದು ಬಿದ್ದಿರಲಾರದ, ಮತ್ತಿ ಆಕಿಗಿ ಕೈಯೆತ್ತಿತಿಯೆನಲೋ...?'- ಕಾಮಾರಧೀರಮ್ಮ

'ನೀವನ್ನಹೇಳ್ರಂಗೆಸಾಕಗಿಬಿಟ್ಟೈತಿಜಲ್ಮಕ್ಕ'-ಮಾರೆಮ್ಮ

'ಲೋ ಇಕಾರ ಇಕಾರ ಸಿನ್ಮ ನೋಡಿಬಂದು, ದುಡುದು ಬಂದು ಮಕ್ಕಂಡೋರಿಗೆ ಇಕಾರ ಇಕಾರ ಮಾಡತಿರೆನಲೋ ಇಕಾರಗೇಡಿಗಳೇ...'-ಜಂತಗಲ್ ನಿಂಗಮ್ಮ

'ದುಡಿಲಿಕ್ಕರ ಏನಾತಿ, ದುಡದದ್ದು ಹಾಳು ಮಾಡಬ್ಯಾಡ್ರಿ'- ಜಿನ್ನದೋರು ಹಂಪಮ್ಮ.

ಮಾರೆಮ್ಮ ಇನ್ನ ಭಂಗ ಮಾಡುತ್ತಾ ಕುಳಿತಿದ್ದಳು. ಇವು ಆಳಿಗೊಂದು ಮಾತಾಡಿ ಅವಳೆಪ್ಪನ ಹರದು ತಿಂದು ತಮ್ಮ ತಮ್ಮ ಮನಿಗಿ ಹೋದವು.

* * *

ಕತ್ತಲಾಯಿತು. ಹಗಲಲ್ಲಾಗಿದ್ದ ಜಗಳವನ್ನೆ ಮನದಲ್ಲಿ ನೆನೆದು ಅವಳೆಪ್ಪ ಈಗ ಸ್ವಲ್ಪ ಶಾಂತವಾಗಿದ್ದ. ಆದರೆ ಒಂದು ಕೊರಗು ಮೆದೆಹುಳು ಮೇಯ್ದಂಗ ಅವಳೆಪ್ಪನ ತಲೆಯನ್ನು ಮೇಯ್ತಿತ್ತು. ಮಾರೆಮ್ಮ ಪಕ್ಕದಲ್ಲಿ ಮಲಗಿದ್ದರೂ ಮುಟ್ಟುವಂತಿಲ್ಲ. ನನ್ನದೆಂತ ಕರ್ಮ ಅಂತ ಅಂದುಕೊಂಡ. ಮಂದಿಗೆ ಮಾತ್ರ ಗಂಡಹೆಂಡತಿ ಇದ್ದಂಗ ಇದ್ದೀವಿ, ಮನೆಯಲ್ಲಿ ಮಾತ್ರ ಯಾವುದು ಸುಖ ಇಲ್ಲ. ನನಿಗಿ ಸಾಯತನ ಸುಖ ಇಲ್ಲೇನು? ಅಂತ ಲೆಕ್ಕ ಹಾಕಿದ. ಬೀಜ ಹೊಡದ ಎತ್ತು ಆದಂಗ ಆಗಿಬಿಟ್ಟೇನಿ, ಒಂದೊಂದು ಸಲ ಸತ್ತರ ಸಾಯಿಲಿ ಸುಖಪಡಲೇನು ಅಂತ ಅವಳೆಪ್ಪನ ಮನಸ್ಸು ಹೊಯ್ದಾಡುತ್ತಿತ್ತು. ಇವಳು ಎಷ್ಟು ದಿನ ಅಂತ ನನ್ನ ಬಗಲಾಕ ಕರಕೋದಿಲ್ಲ ನಾನು

